# ಕರ್ನಾಟಕದಲ್ಲಿ ಶ್ರೀಶಾರದಾಮಠಗಳು ಹಾಗೂ ಅವುಗಳ ಚಟುವಟಿಕೆಗಳು

**ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

ಸ್ವಾಮಿ ವಿವೇಕಾನಂದರು ಬಯಸಿದ್ದಂತೆ ಸ್ತ್ರೀಯರಿಗಾಗಿಯೇ ಇರುವ ಆಧ್ಯಾತ್ಮಿಕ ಸಂಘವೊಂದು ಆರಂಭಗೊಂಡು, ಶ್ರೀಶಾರದಾ ಮಠ ಮತ್ತು ಮಿಷನ್ ಎಂಬ ಹೆಸರಿನಲ್ಲಿ ದೇಶದಾದ್ಯಂದ ವಿವಿಧ ಕೇಂದ್ರಗಳ ಮೂಲಕ ಸೇವಾಕಾರ್ಯಗಳನ್ನು ಯಶಸ್ವಿಯಾಗಿ ನಡೆಸುತ್ತಿವೆ. ಕರ್ನಾಟಕದಲ್ಲಿ ಕೂಡ ಈ ಸಂಸ್ಥೆಯ ಶಾಖೆಗಳಿದ್ದು, ರಾಮಕೃಷ್ಣ ಭಾವಧಾರೆ ಹರಡುವಲ್ಲಿ ಈ ಸಂಸ್ಥೆಗಳ ಪಾತ್ರ ಹಿರಿದು. ಈ ವಿಷಯಕ್ಕೆ ಸಂಬಂಧಿಸಿದಂತೆ ಇಲ್ಲಿ ಬರೆದಿರುವ ಲೇಖಕಿ, ಬೆಂಗಳೂರು ಶ್ರೀಶಾರದಾ ಮಠದ ಶೈಕ್ಷಣಿಕ ಸೇವಾಕೇಂದ್ರವಾದ ಜುಂಜರಾಮನ ಹಳ್ಳಿಯಲ್ಲಿರುವ ನಿವೇದಿತಾ ವಿದ್ಯಾಪೀಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಶ್ರೀಶಾರದಾ ಮಠ, ಬೆಂಗಳೂರು



೧೮೯೪ ರಲ್ಲಿ ಸ್ವಾಮಿ ವಿವೇಕಾನಂದರು ಸ್ವಾಮಿ ಬ್ರಹ್ಮಾನಂದರಿಗೆ ಅಮೆರಿಕಾದಿಂದ ಬರೆಯುತ್ತಾರೆ : ''ಸಂನ್ಯಾಸ ಜೀವನಕ್ಕೆ ಬರುವಂತೆ ಕರೆನೀಡು. ಯಾರಿಗೆ ಆಗ್ರಹವೋ ಅವರೆಲ್ಲರೂ ಬರಲಿ. ಪುರುಷರೋ ಸ್ತ್ರೀಯರೋ ನೋಡಬೇಡ. ಕೆಲಸ ಆರಂಭಮಾಡು. ನಾನು ಬೇಗ ನಿಮ್ಮ ನಡುವೆ ಬರುತ್ತೇನೆ. ಒಂದು ದೊಡ್ಡ ಆಧ್ಯಾತ್ಮಿಕ ಅಲೆ ಧಾವಿಸಿ ಬರುತ್ತಿದೆ. ಅತ್ಯಂತ ನೀಚನೂ ಇದರ ಹೊಡೆತಕ್ಕೆ ಸಿಕ್ಕಿ ಉನ್ನತ ಜೀವನ ಪಡೆಯುತ್ತಾನೆ. ಭಗವಂತನ ಕೃಪೆಯಿಂದ ಪೆದ್ದನೂ ದೊಡ್ಡ ಪಂಡಿತನಾಗುತ್ತಾನೆ. ಏಳಿ! ಎದ್ದೇಳಿ! ಗುರಿ ಮುಟ್ಟುವವರೆಗೂ ನಿಲ್ಲಬೇಡಿ!''

೧೮೯೬ ರಲ್ಲಿ ಒಂದು ದಿನ ಲಂಡನ್ನಿನಲ್ಲಿ ತಮ್ಮ ಬಳಿ ನೆರೆದಿದ್ದ ಸ್ತ್ರೀಪುರುಷರಿಗೆ ಎದುರಾಗಲಿರುವ ಒಂದು ಆಧ್ಯಾತ್ಮಿಕ ಪರಿವರ್ತನೆಯಲ್ಲಿ ಭಾಗಿಯಾಗುವಂತೆ ಕರೆನೀಡುತ್ತಾ ಸ್ವಾಮೀಜಿ ಹೇಳಿದ್ದರು, ''ಈಗ ಜಗತ್ತಿಗೆ ಬೇಕಾಗಿರುವುದು ಭಗವಂತನಿಗಾಗಿ ಎಲ್ಲವನ್ನೂ ತ್ಯಾಗಮಾಡುವ ಎದೆಗಾರಿಕೆಯುಳ್ಳ ತರುಣ ತರುಣಿಯರು. ನಿಮ್ಮಲ್ಲಿ ಯಾರಿಗೆ ಈ ಸಾಹಸವಿದೆ? ಮುಂದೆ ಬನ್ನಿ!'' ಈ ಆಹ್ವಾನವನ್ನು ನೀಡಿ ಸ್ವಾಮೀಜಿ ಅತ್ಯಂತ ನಿರೀಕ್ಷೆಯಿಂದ ಎದುರಿಗಿದ್ದ ಮುಖಗಳತ್ತ ದಿಟ್ಟಿಸಿದರು.

ಸ್ವಾಮೀಜಿಯವರ ಈ ಕರೆಗೆ ಪಾಶ್ಚಾತ್ಯ ಮಹಿಳೆಯರಿಂದ ಉತ್ತರ ದೊರಕಿದರೂ ಭಾರತದ ಮಹಿಳೆಯರಿಂದ ಸರಿಯಾದ ಪ್ರತಿಕ್ರಿಯೆ ಸಿಗಲಿಲ್ಲ. ಆಗಿನ ಕಾಲದಲ್ಲಿ ಮಹಿಳೆಯರನ್ನು ವಿದ್ಯಾಭ್ಯಾಸದಿಂದ ದೂರವಿಡಲಾಗಿತ್ತು. ಜೊತೆಗೆ ಬಾಲ್ಯವಿವಾಹ, ಸತಿ ಸತಿಸಹಗಮನ ಮುಂತಾದ ನಾನಾ ರೀತಿಯ ಸಾಮಾಜಿಕ ನಿಯಮಗಳಲ್ಲಿ ಮಹಿಳೆಯರು ಬದ್ಧರಾಗಿದ್ದರು.

ಶ್ರೀರಾಮಕೃಷ್ಣರಿಗೆ ಮಹಿಳೆಯರ ಬಗ್ಗೆ ಇದ್ದ ಶ್ರದ್ಧೆ ಹಾಗೂ ಸಮತ್ವ ಭಾವನೆಯನ್ನು ವಿವೇಕಾನಂದರು ಉತ್ತರಾಧಿಕಾರಿಯಾಗಿ ಪಡೆದಿದ್ದರು. ಮಹಿಳೆಯರ ಆಧ್ಯಾತ್ಮಿಕ ಜಾಗೃತಿಯ ವಿಚಾರವಾಗಿ ಸ್ವಾಮಿ ವಿವೇಕಾನಂದರ ವಿಚಾರಗಳು ಇತರ ಮಹಾಪುರುಷರು ಹಾಗೂ ಸಮಾಜ ಸುಧಾರಕರಿಗಿಂತ ಅತ್ಯಂತ ಭಿನ್ನ ಹಾಗೂ ಕ್ರಾಂತಿಕಾರಕವಾಗಿದ್ದವು ಸ್ತ್ರೀಯರ ಶಕ್ತಿಯಲ್ಲಿ ಎಣೆಯಿಲ್ಲದ ಭರವಸೆಯನ್ನಿಟ್ಟ ಮೊದಲ ಆಚಾರ್ಯರೇ ಸ್ವಾಮಿ ವಿವೇಕಾನಂದರು. ಅವರ ಮಾತುಗಳಲ್ಲಿ — ''ಹೆಂಗಸರಲ್ಲಿ ಒಬ್ಬಳಾದರೂ ಬ್ರಹ್ಮಜ್ಞಾನಿಯಾದರೆ ಆಕೆಯ ಪ್ರಭಾವದಿಂದ ಸಾವಿರಾರು ಮಹಿಳೆಯರಲ್ಲಿ ಆತ್ಮಜಾಗೃತಿಯುಂಟಾಗುತ್ತದೆ. ಇದರಿಂದ ಜಗತ್ತಿನ ಕಲ್ಯಾಣವಾಗುತ್ತದೆ.''

ಭೈರವಿ ಬ್ರಾಹ್ಮಣಿಯನ್ನು ಶ್ರೀರಾಮಕೃಷ್ಣರು ಗುರುವಾಗಿ ಸ್ವೀಕರಿಸಿದ್ದರು. ಶ್ರೀಮಾತೆ ಶಾರದಾದೇವಿಯವರಿಗೆ ತಮ್ಮ ಎಲ್ಲಾ ತಪಸ್ಸಿನ ಶಕ್ತಿಯನ್ನು ಧಾರೆಯೆರೆದು ಪೂಜಿಸಿದ್ದರು. ರಾಮಕೃಷ್ಣರ ಜೀವನದ ಈ ಎಲ್ಲಾ ಘಟನೆಗಳ ತಾತ್ಪರ್ಯವನ್ನು ಸ್ವಾಮೀಜಿ ಚೆನ್ನಾಗಿ ಗ್ರಹಿಸಿದ್ದರು. ಜಗತ್ತಿನ ಕಲ್ಯಾಣವು ಮಹಿಳೆಯರ ಅಭ್ಯುದಯವಾಗದಿದ್ದರೆ ಆಗದು. ಹಕ್ಕಿ ಒಂದೇ ರೆಕ್ಕೆಯಿಂದ ಹಾರಲಾರದು. ಅದಕ್ಕಾಗಿಯೇ ರಾಮಕೃಷ್ಣರು ಒಬ್ಬರು ಮಹಿಳೆಯನ್ನು ಗುರುವಾಗಿ ಸ್ವೀಕರಿಸಿದ್ದರು, ನಾರೀಭಾವದಲ್ಲಿ ಸಾಧನೆ ಮಾಡಿದರು ಹಾಗೂ ಮಾತೃಭಾವವನ್ನು ಪ್ರಚಾರ ಮಾಡಿದರು ಎನ್ನುತ್ತಾರೆ ಸ್ವಾಮೀಜಿಯವರು.

ಅಮೆರಿಕಾದಲ್ಲಿರುವಾಗಲೇ ಸ್ವಾಮೀಜಿಯವರು ತಮ್ಮ ಸೋದರ ಸಂನ್ಯಾಸಿಗಳಿಗೆ ಬರೆದ ಪತ್ರಗಳಲ್ಲಿ ಸ್ತ್ರೀಮಠದ ಸ್ಥಾಪನೆಯ ಬಗ್ಗೆ ವಿವಿಧ ರೀತಿಯ ಸೂಚನೆಗಳನ್ನು ನೀಡಿದ್ದರು. ಈ ಕೆಲಸಕ್ಕಾಗಿ ಗೌರಿ-ಮಾ, ಯೋಗಿನ್-ಮಾ ಮುಂತಾದವರು ಮುಂದೆ ಬರಲಿ ಎಂದು ಕರೆನೀಡುತ್ತಾರೆ.

೧೯೦೧ ರಲ್ಲಿ ಬೇಲೂರು ಮಠದಲ್ಲಿ ಸ್ವಾಮೀಜಿಯವರು ತಮ್ಮ ಶಿಷ್ಯನಾದ ಶರಶ್ಚಂದ್ರನೆದುರು ತಮ್ಮ ಮನಸ್ಸಿನಲ್ಲಿ ಕೊರೆಯುತ್ತಿದ್ದ ಈ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ: ''ಶ್ರೀಮಾತೆಯವರನ್ನು ಕೇಂದ್ರವಾಗಿರಿಸಿಕೊಂಡು ಮಹಿಳೆಯರಿಗೆ ಒಂದು ಮಠವನ್ನು ಆರಂಭಿಸಬೇಕು... ಗಂಗೆಯ ಪೂರ್ವದಡದಲ್ಲಿ ಇದಕ್ಕಾಗಿ ಒಂದು ವಿಶಾಲವಾದ ಜಮೀನನ್ನು ಕೊಳ್ಳಬೇಕು... ಈ ಮಠವು ಬ್ರಹ್ಮಚಾರಿಗಳು ಹಾಗೂ ಸಂನ್ಯಾಸಿಗಳ ಸಾಧನೆಯ ಸ್ಥಾನವಾದಂತೆ ಆ ಮಠದಲ್ಲಿ ಬ್ರಹ್ಮಚಾರಿಣಿಯರ, ಸಂನ್ಯಾಸಿನಿಯರ ಸಾಧನೆ ನಡೆಯಬೇಕು.''

ಸಂಘ ಶಕ್ತಿಯಿಂದ ಅನೇಕ ಮಹಾಕಾರ್ಯಗಳ ಸಾಧನೆ ಮಾಡಬಹುದೆಂದು ತಿಳಿದಿದ್ದ ಸ್ವಾಮೀಜಿ ಭಾರತದಲ್ಲಿ ಸಂನ್ಯಾಸಿಗಳ ಸಂಘವನ್ನು ಆರಂಭಿಸಿದರೆ ತಮ್ಮ ಮೋಕ್ಷದ ಸಾಧನೆ ಹಾಗೂ ಜಗತ್ತಿನ ಉಪಕಾರ ಎರಡೂ ಒಟ್ಟಿಗೆ ಸಾಧ್ಯವಾಗುತ್ತದೆಂದು ಅಮೆರಿಕಾದಲ್ಲಿ ಇರುವಾಗಲೇ ತಮ್ಮ ಸೋದರ ಸಂನ್ಯಾಸಿಗಳಿಗೆ ಎಲ್ಲರೂ ಒಟ್ಟಾಗಿ ಈ ಜಗತ್ತಿನ ಹಿತಕ್ಕಾಗಿ ದುಡಿಯಬೇಕೆಂದು ಅತ್ಯಂತ ವ್ಯಾಕುಲತೆಯಿಂದ ಕರೆನೀಡಿದರು. ಸಮಾಜ ಸುಧಾರಕ ಕೆಲಸಕ್ಕಿಂತ ಸಂನ್ಯಾಸಿ ಸಂಘದ ಕೆಲಸ ಮಹತ್ತಾದುದು. ಸ್ವಾಮೀಜಿ ಹೇಳುತ್ತಾರೆ, ''ತ್ಯಾಗವೇ ಮುಖ್ಯವಾದುದು. ತ್ಯಾಗಿಯಾಗದಿದ್ದರೆ ಬೇರೆಯವರಿಗೆ ಪ್ರಾಣಕೊಟ್ಟು ಕೆಲಸಮಾಡಲು ಯಾರಿಗೂ ಸಾಧ್ಯವಿಲ್ಲ. ತ್ಯಾಗಿಯಾದವನು ಎಲ್ಲರನ್ನೂ ಸಮಭಾವದಿಂದ ನೋಡಿ ಎಲ್ಲರ ಸೇವೆ ಮಾಡಲು ಮುಂದುವರಿಯುತ್ತಾನೆ.'' **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಹೊಸ ದೃಷ್ಟಿಯನ್ನು ಅವರು ಈ ಸಂನ್ಯಾಸಿ ಸಂಘಕ್ಕೆ ನೀಡಿದರು.

ಸ್ವಾಮೀಜಿಯವರಿಗೆ ಸ್ತ್ರೀಮಠವನ್ನೇ ಮೊದಲು ಸ್ಥಾಪಿಸಲು ಇಚ್ಛೆಯಿದ್ದರೂ ಅಂದಿನ ಸಮಾಜದ ಪರಿಸ್ಥಿತಿಯು ಇದಕ್ಕೆ ಪೂರಕವಾಗಿರಲಿಲ್ಲ. ಯೋಗ್ಯ ಶಿಕ್ಷಣದ ಅಗತ್ಯವನ್ನು ಅರಿತು ಸ್ವಾಮೀಜಿ ಹೆಂಗಸರಿಗಾಗಿ ಒಂದು ವಿದ್ಯಾಲಯವನ್ನು ಆರಂಭಿಸುವ ಯೋಜನೆಯನ್ನು ಹಾಕಿದರು. ವಿದ್ಯಾವಂತಳಾದ ಒಬ್ಬಳಾದರೂ ಮಹಿಳೆ ಸಹಾಯಕ್ಕೆ ಮುಂದೆ ಬಂದರೆ ಈ ಕೆಲಸದ ದಾರಿ ಸುಗಮವಾಗುತ್ತದೆ. ಅಂದಿನ 'ಭಾರತಿ' ಎಂಬ ಪತ್ರಿಕೆಯ ಸಂಪಾದಕಿಯಾದ ಸರಳಾ ಘೋಷಾಲ್ ಎಂಬುವರಿಗೆ ಸ್ವಾಮೀಜಿ ಈ ಬಗ್ಗೆ ಪತ್ರವನ್ನು ಬರೆದರು. ಆಕೆಯಿಂದ ನಿರೀಕ್ಷಿಸಿದ ಪ್ರತಿಕ್ರಿಯೆ ಸಿಗಲಿಲ್ಲ. ಇನ್ನು ಕೆಲವು ಮಹಿಳೆಯರು ಕ್ರಿಶ್ಚಿಯನ್ ಮಿಷನರಿಗಳ ಪ್ರಭಾವಕ್ಕೆ ಒಳಗಾಗಿ ಹಿಂದೂಧರ್ಮದ ವಿರುದ್ಧವಾಗಿ ಪ್ರಚಾರಕ್ಕೆ ಇಳಿದಿದ್ದರು! ಆದರೆ ಐರಿಷ್ ಮಹಿಳೆ ಮಾರ್ಗರೆಟ್ ನೋಬಲ್ ಸ್ವಾಮೀಜಿಯ ಭಾರತದ ಕೆಲಸಕ್ಕೆ ಜೀವನವನ್ನು ಸಮರ್ಪಿಸಲು ೧೮೯೮ರಲ್ಲಿ ಭಾರತಕ್ಕೆ ಬಂದರು. ಅವರು ಸ್ವಾಮೀಜಿಯವರಿಂದ ಬ್ರಹ್ಮಚರ್ಯ ದೀಕ್ಷೆಯನ್ನು ಪಡೆದು 'ನಿವೇದಿತಾ' ಎಂಬ ಹೆಸರನ್ನು ಪಡೆದರು.

ನಿವೇದಿತೆಯು ಬಾಗ್‌ಬಜಾರಿನಲ್ಲಿ ತಮ್ಮ ವಿದ್ಯಾಲಯವನ್ನು ಆರಂಭಿಸಿದರು. ೧೮೯೮ರ ನವೆಂಬರ್ ತಿಂಗಳಲ್ಲಿ ಸ್ವಾಮೀಜಿಯವರು ಈ ವಿದ್ಯಾಲಯವನ್ನು ಶ್ರೀಮಾತೆಯವರಿಂದಲೇ ಪೂಜೆ ಮಾಡಿಸಿ ಉದ್ಘಾಟನೆ ಮಾಡಿಸಿದರು. ಶ್ರೀರಾಮಕೃಷ್ಣರ ಭಾವಧಾರೆಯಿಂದ ಆರಂಭವಾದ ಮೊಟ್ಟಮೊದಲ ಶಾಲೆಯೇ ಇದು. ಮುಂದೆ ಸೋದರಿ ನಿವೇದಿತಾ ಬಾಲಕಿಯರ ಶಾಲೆಯಾಗಿ ಬೆಳೆದ ಈ ಶಾಲೆಯೇ ಸ್ತ್ರೀಮಠಕ್ಕೆ ನಾಂದಿಯಾಯಿತು.

ರಾಮಕೃಷ್ಣ ಮಹಾಸಂಘವು ಸ್ಥಾಪನೆಯಾದ ನಂತರ ರೂಪಿಸಿದ ಮಠದ ನಿಯಮಗಳಲ್ಲಿ ಮಹಿಳೆಯರು ಸಂನ್ಯಾಸ ಸ್ವೀಕರಿಸುವ ಬಗ್ಗೆ ಹಾಗೂ ಅವರಿಗಾಗಿ ಸ್ವತಂತ್ರವಾದ ಮಠವನ್ನು ಸ್ಥಾಪಿಸುವ ಬಗ್ಗೆ ಸ್ವಾಮೀಜಿಯವರು ಸ್ಪಷ್ಟವಾದ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ನೀಡಲಾಗಿದೆ :

* ಸ್ತ್ರೀಮಠವನ್ನು ನಿರ್ವಹಿಸುವಂತಹ ಸಮರ್ಥ ಮಹಿಳೆಯರು ಬರುವವರೆಗೆ ಪುರುಷರೇ ಅದನ್ನು ದೂರದಿಂದ ನಿರ್ವಹಿಸುವುದು.

* ಬೇಲೂರು ಮಠದ ಹಿರಿಯರೇ ದೂರದಿಂದ ನಿರ್ವಹಿಸುವುದು.

* ತದನಂತರ ಸ್ತ್ರೀಯರು ತಾವೇ ತಮ್ಮೆಲ್ಲ ವ್ಯವಹಾರಗಳನ್ನು ತಾವೇ ನಿರ್ವಹಿಸುವರು.

* ಸ್ತ್ರೀಮಠಕ್ಕೆ ಯಾವುದೇ ಸಂನ್ಯಾಸಿಗಳೊಂದಿಗೆ ಸಂಪರ್ಕವಿರಬಾರದು ಅಂತೆಯೇ ಪುರುಷಮಠಕ್ಕೂ ಯಾವುದೇ ಸಂನ್ಯಾಸಿನಿಯರೊಂದಿಗೆ ಸಂಪರ್ಕವಿರಬಾರದು.

ಅಂತೂ ಶ್ರೀಮಾತೆಯವರ ಜನ್ಮ ಶತಮಾನೋತ್ಸವದ ಸಮಯಕ್ಕೆ ಸ್ತ್ರೀಮಠ ಸ್ಥಾಪನೆಯ ಕಾಲ ಕೂಡಿಬಂದಿತ್ತು. ಬೇಲೂರು ಮಠದ ಹಿರಿಯರ ಶ್ರಮ ಹಾಗೂ ಒತ್ತಾಸೆಯಿಂದ ೧೯೫೪ರ ಡಿಸೆಂಬರ್ ೨ರಂದು ಗಂಗೆಯ ಪೂರ್ವದಡದಲ್ಲಿ ದಕ್ಷಿಣೇಶ್ವರದ 'ಸುರಧುನಿ ಕಾನನ್' ಎಂಬ ಸ್ಥಳದಲ್ಲಿ ಶ್ರೀಶಾರದಾಮಠದ ಸ್ಥಾಪನೆಯಾಯಿತು. ಓರ್ವ ಋಷಿಯ ಬಹುಕಾಲದ ಆಸೆ ಹೀಗೆ ಮೂರ್ತರೂಪ ತಾಳಿತು! ಅಂದು ರಾಮಕೃಷ್ಣ ಮಠದ ಅನೇಕ ಹಿರಿಯ ಸಂನ್ಯಾಸಿಗಳು ಹಾಗೂ ಭಕ್ತರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಬ್ರಹ್ಮಚಾರಿಣಿಯರ ವೇದಪಾಠ ಹಾಗೂ ಸ್ತೋತ್ರಗಳ ನಡುವೆ ರಾಮಕೃಷ್ಣ ಮಠದ ಸಂಘಾಧ್ಯಕ್ಷರಾದ ಸ್ವಾಮಿ ಶಂಕರಾನಂದರು ದಿವ್ಯತ್ರಯರ ಭಾವಚಿತ್ರಗಳನ್ನು ಗರ್ಭಮಂದಿರದಲ್ಲಿ ಪ್ರತಿಷ್ಠಾಪಿಸಿದರು. ದಿನವಿಡೀ ನಡೆದ ಭಜನೆ, ಪೂಜೆ, ಹೋಮ-ಹವನಾದಿಗಳಿಂದ ವಾತಾವರಣವೆಲ್ಲಾ ಆಧ್ಯಾತ್ಮಿಕ ತರಂಗಗಳಿಂದ ಅನುರಣಿಸುತ್ತಿತ್ತು.

ಸ್ತ್ರೀಮಠ ಸ್ಥಾಪನೆಯ ಸಂಕಲ್ಪ ಮಂತ್ರವನ್ನು ಸ್ವಾಮಿ ಓಂಕಾರಾನಂದರು ರಚಿಸಿದ್ದರು. ಈ ಸಂಕಲ್ಪವನ್ನು ಎರಡನೇ ಬಾರಿಗೆ ಉಚ್ಚರಿಸಬೇಕಾಗಿರುವುದಿಲ್ಲವಾದ್ದರಿಂದ ಪೂಜೆಯು ಸಾಂಗವಾದ ಮೇಲೆ ಸಂಕಲ್ಪ ಬರೆದ ಹಾಳೆಯನ್ನು ಗಂಗೆಯಲ್ಲಿ ವಿಸರ್ಜಿಸಬೇಕೆಂದು ಬೇಲೂರು ಮಠದ ಹಿರಿಯರು ವಿಧಿಸಿದ್ದರು. ಏಕೆಂದರೆ, ಮುಂದೆ ರಾಮಕೃಷ್ಣ ಸಂಘದ ಎಷ್ಟೋ ಸ್ತ್ರೀಮಠಗಳು ಸ್ಥಾಪನೆಯಾಗಬಹುದು. ಆದರೆ ಅವೆಲ್ಲಾ ಈ ಮೂಲಮಠದ ಶಾಖೆಗಳೇ ಆಗಿರುತ್ತವೆ. ಇದು ದಕ್ಷಿಣೇಶ್ವರದ ಶ್ರೀಶಾರದಾ ಮಠಕ್ಕೆ ವಿಶೇಷ ಸ್ಥಾನ-ಮಾನ ನೀಡಿದೆ. ನಂತರ ಹುಟ್ಟಿಕೊಂಡಿರುವ ಅನೇಕ ಸ್ತ್ರೀಸಂಸ್ಥೆಗಳಲ್ಲಿ ಇದೂ ಒಂದು ಎಂದು ಪರಿಗಣಿಸಬಾರದು; ಏಕೆಂದರೆ ಸ್ವಾಮಿ ವಿವೇಕಾನಂದರಿಂದ ಸಂಕಲ್ಪಿಸಲ್ಪಟ್ಟು ವಿಧಿವತ್ತಾಗಿ ಸ್ಥಾಪಿತವಾದ ಮಠವು ಇದಾಗಿದೆ.

ಒಮ್ಮೆ ಸ್ವಾಮೀಜಿಯವರು ಶರಚ್ಚಂದ್ರನೊಡನೆ ಮಾತನಾಡುತ್ತಾ ಹೀಗೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು: '' ಮುಂದೆ ರಾಮಕೃಷ್ಣ ಸಂಘದ ಆದರ್ಶಗಳಿಂದ ಪ್ರೇರೇಪಿತರಾಗಿ ಅನೇಕ ಪಂಗಡಗಳು ಹುಟ್ಟಿಕೊಳ್ಳಬಹುದು, ಆದರೆ ಬೇಲೂರು ಮಠವೇ ಪ್ರಮುಖವಾದದ್ದು, ನಾಯಕನಂತೆ. ಅಂತೆಯೇ ದಕ್ಷಿಣೇಶ್ವರದ ಮಠವು ಸಂನ್ಯಾಸಿನಿಯರಿಗೆ.''

೧೯೫೪ರಿಂದ ೧೯೫೮ರವರೆಗೆ ಶ್ರೀಶಾರದಾ ಮಠವು ಬೇಲೂರು ಮಠದ ಒಂದು ಶಾಖಾಕೇಂದ್ರವಾಗಿತ್ತು. ಬೇಲೂರು ಮಠದ ಟ್ರಸ್ಟಿಗಳೇ ಇದರ ಜವಾಬ್ದಾರಿ ಹೊತ್ತಿದ್ದರು. ಶ್ರೀಮಾತೆಯವರ ಕೊನೆಯ ಅನಾರೋಗ್ಯದ ಸಮಯದಲ್ಲಿ ಅತ್ಯಂತ ನಿಷ್ಠೆಯಿಂದ ಅವರ ಸೇವೆ ಮಾಡಿದ್ದ ಸರಳಾದೇವಿಯವರು ಮಾತೆಯವರ ನಿರ್ಯಾಣಾನಂತರ ಕಾಶಿಯಲ್ಲಿ ನೆಲೆಸಿ ೨೭ ವರ್ಷಗಳ ಕಾಲ ತಪಸ್ಯಾನಿರತರಾಗಿದ್ದರು. ಈಗ ಅವರನ್ನು ಬೇಲೂರು ಮಠದ ಹಿರಿಯರು ಶ್ರೀಶಾರದಾ ಮಠದ ಮುಖ್ಯಸ್ಥರನ್ನಾಗಿ ಮಾಡಬೇಕೆಂದು ನಿರ್ಧರಿಸಿದರು. ಶ್ರೀಮಾತೆಯವರು ತಮ್ಮ ನೆಚ್ಚಿನ ಸರಳಾಗೆ ಒಮ್ಮೆ, ''ನಿನ್ನ ಮೂಲಕ ಮಾಡಿಸುವ ನನ್ನ ಕೆಲಸ ಇನ್ನೂ ಬಾಕಿ ಇದೆ. ಅದು ಮುಗಿದ ಬಳಿಕ ನೀನು ನನ್ನ ಬಳಿಯೇ ಬರುವೆ'' ಎಂದಿದ್ದರು. ಅದು ಇದೇ ಕೆಲಸಕ್ಕಾಗಿಯೇ ಅಲ್ಲವೆ?

೧೯೫೯ ರ ಜನವರಿ ೧, ಶ್ರೀಮಾತೆಯವರ ಜಯಂತಿಯಂದು ಸರಳಾದೇವಿಯವರೊಂದಿಗೆ ೭ ಬ್ರಹ್ಮಚಾರಿಣಿಯರಿಗೆ ಸಂಘಾಧ್ಯಕ್ಷರಾದ ಸ್ವಾಮಿ ಶಂಕರಾನಂದರು ಹಿರಿಯ ಸಂನ್ಯಾಸಿಗಳ ಸಮಕ್ಷಮದಲ್ಲಿ ಸಂನ್ಯಾಸದೀಕ್ಷೆಯನ್ನಿತ್ತರು. ಅದೇ ವರುಷ, ೧೯೫೯ರ ಆಗಸ್ಟ್ ೨೬ರಂದು ಬೇಲೂರು ಮಠದ ಟ್ರಸ್ಟಿಗಳು ಶ್ರೀಶಾರದಾ ಮಠವನ್ನು ಸ್ವತಂತ್ರ ಸಂಸ್ಥೆಯೆಂದು ಘೋಷಿಸಿದರು. ಪ್ರವ್ರಾಜಿಕಾ ಭಾರತೀ ಪ್ರಾಣಾಜಿಯವರು ಅಧ್ಯಕ್ಷರಾದರು, ಉಳಿದ ಏಳು ಸಂನ್ಯಾಸಿನಿಯರು ಟ್ರಸ್ಟಿಗಳಾದರು.

ಕ್ರಿ.ಶ. ೧೯೬೦ರ ಮೇ ತಿಂಗಳಿನಲ್ಲಿ ಬೇಲೂರು ಮಠದ ಸಲಹೆಯ ಮೇರೆಗೆ ಶ್ರೀಶಾರದಾ ಮಠದ ಟ್ರಸ್ಟಿಗಳು ಸಾರ್ವಜನಿಕರ ಹಿತಕ್ಕಾಗಿ ಸಂನ್ಯಾಸಿನಿಯರನ್ನೂ, ಭಕ್ತೆಯರನ್ನೂ ಒಳಗೊಂಡ 'ರಾಮಕೃಷ್ಣ ಶಾರದಾ ಮಿಷನ್ ಅಸೋಸಿಯೇಷನ್' ಅನ್ನು ಪ್ರಾರಂಭಿಸಿದರು. ಮಠವು ಆಧ್ಯಾತ್ಮಿಕ ಉನ್ನತಿಗೆ ಒತ್ತು ಕೊಡುತ್ತದೆ (**ಆತ್ಮನೋ ಮೋಕ್ಷಾರ್ಥಂ**), ಮಿಷನ್ ಎಂಬುದು ಸಮಾಜ ಸೇವೆಗೆ ಒತ್ತು ಕೊಡುತ್ತದೆ (**ಜಗದ್ಧಿತಾಯ**).

ಶ್ರೀಶಾರದಾ ಮಠ ಮತ್ತು ರಾಮಕೃಷ್ಣ ಶಾರದಾ ಮಿಷನ್ ಎಂಬುದು ಶ್ರೀರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನಿಂದ ಆಡಳಿತಾತ್ಮಕವಾಗಿ ಹಾಗೂ ಕಾನೂನು ರೀತ್ಯಾ ಬೇರೆಯಾಗಿದ್ದರೂ ಎರಡರ ಮೂಲೋದ್ದೇಶವೂ ಒಂದೇ ಆಗಿದೆ. **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಇದರ ಸರಳಾರ್ಥವು ಶ್ರೀರಾಮಕೃಷ್ಣರು ನಿರ್ದೇಶಿಸಿದ ಪಥದಲ್ಲಿ ತನ್ನ ಸ್ವಂತ ಮುಕ್ತಿ ಸಾಧನೆ ಹಾಗೂ ಜಗತ್ತಿನ ಸರ್ವತೋಮುಖ ಹಿತವನ್ನು ಸಾಧಿಸುವುದಾಗಿದೆ.

ಭಾರತದ ಪ್ರತಿ ರಾಜ್ಯದಲ್ಲಿ ಒಂದೊಂದು ಮಹಿಳೆಯರ ಮಠವನ್ನು ಆರಂಭಿಸುವುದು ಸ್ವಾಮೀಜಿಯವರ ಹೆಬ್ಬಯಕೆಯಾಗಿತ್ತು. ''ಅನೇಕ ಕಡೆ ಕೇಂದ್ರವನ್ನು ಸ್ಥಾಪಿಸುತ್ತಾ ಹೋಗಿ ... '' *(ಕೃತಿಶ್ರೇಣಿ, ಸಂ. ೪ ಪು.೨೨೨)* ಎಂಬ ಸ್ವಾಮೀಜಿಯ ಕರೆಯು ಈ ಎಪ್ಪತ್ತು ವರ್ಷಗಳಲ್ಲಿ ಕೈಗೂಡುತ್ತಾ ಬಂದಿದೆ.

ಕೋಲ್ಕತ್ತಾದ ದಂದಂ ಎಂಬಲ್ಲಿನ 'ರಾಮಕೃಷ್ಣ ಶಾರದಾ ಮಿಷನ್ ವಿವೇಕಾನಂದ ವಿದ್ಯಾಭವನ್' ಮಿಷನ್ನಿನ ಮೊದಲ ಶಾಖೆಯಾಯಿತು. ವಿದ್ಯಾರ್ಥಿನಿಯರಿಗೆ ವಸತಿ ಸೌಕರ್ಯವುಳ್ಳ ಪ್ರಥಮ ದರ್ಜೆ ಪದವಿ ಕಾಲೇಜು ಇದಾಗಿದೆ. ೧೯೬೨ ರಲ್ಲಿ ದ್ವಿತೀಯ ಶಾಖೆಯನ್ನು ಕೊಲ್ಕತ್ತಾದ ಆಲಂಬಜಾರಿನ ಹತ್ತಿರವಿರುವ ಬಾರೂಯೀ ಪಾಡಾ ಹಳ್ಳಿಯಲ್ಲಿ ಪ್ರಾರಂಭಿಸಲಾಯಿತು. 'ಕಿರಿಯ ಪ್ರಾಥಮಿಕ ಶಾಲೆ' ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಕಾಲಕ್ರಮೇಣ ಕೊಲ್ಕತ್ತಾದ ರಾಮಕೃಷ್ಣ ಮಿಷನ್ನಿನ ಆಡಳಿತದಲ್ಲಿದ್ದ ಮೂರು ಸಂಸ್ಥೆಗಳನ್ನು 'ರಾಮಕೃಷ್ಣ ಶಾರದಾ ಮಿಷನ್ನಿ'ಗೆ ವರ್ಗಾಯಿಸಲಾಯಿತು. ಇವು ಕ್ರಮವಾಗಿ 'ಎಂಟಲಿ ಆಶ್ರಮ' 'ಮಾತೃ ಭವನ' ಹಾಗೂ ನಿವೇದಿತಾ ಶಾಲೆ'. ನಂತರ ಕೇರಳದ ತ್ರಿಚೂರ್, ಅರುಣಾಚಲ ಪ್ರದೇಶ, ನವದೆಹಲಿ, ಹೀಗೆ ಅನೇಕ ರಾಜ್ಯಗಳಲ್ಲಿ ಶಾಖೆಗಳನ್ನು ತೆರೆಯಲಾಯಿತು.

ಪ್ರಸ್ತುತ 'ಶ್ರೀ ಶಾರದಾ ಮಠ'ದ ಶಾಖೆಗಳ ಸಂಖ್ಯೆ ಇಂತಿವೆ:

'ಶ್ರೀಶಾರದಾ ಮಠ ಹಾಗೂ ರಾಮಕೃಷ್ಣ ಶಾರದಾ ಮಿಷನ್' ನ ಮೂಲ ಕೇಂದ್ರವು ಕೊಲ್ಕತ್ತಾದ ದಕ್ಷಿಣೇಶ್ವರದಲ್ಲಿದೆ.

ಏಳು ದಶಕಗಳಲ್ಲಿ ಒಟ್ಟು ೩೬ ಮಠ ಹಾಗೂ ಮಿಷನ್ ಕೇಂದ್ರಗಳು ದೇಶಾದ್ಯಂತ ಹಬ್ಬಿವೆ.

ಭಾರತದಲ್ಲಷ್ಟೇ ಅಲ್ಲದೆ ಹೊರದೇಶದಲ್ಲೂ ಭಾವಪ್ರಚಾರ ಕಾರ್ಯ ಭರದಿಂದ ಸಾಗುತ್ತಿದೆ. ಆಸ್ಟ್ರೇಲಿಯಾದ ಸಿಡ್ನಿಯಲ್ಲಿ

‘ರಾಮಕೃಷ್ಣ ಶಾರದಾ ವೇದಾಂತ ಸೊಸೈಟಿ’ಯು ಅಲ್ಲಿನ ಜನರ ಆಧ್ಯಾತ್ಮಿಕ ಹಸಿವನ್ನು ತಣಿಸುತ್ತಿದೆ. ಶ್ರೀಲಂಕಾದ ಕೊಲೊಂಬೋದಲ್ಲಿನ ‘ರಾಮಕೃಷ್ಣ ಶಾರದಾ ಮಿಷನ್’ ವೃದ್ಧ ಮಹಿಳೆಯರಿಗಾಗಿ ‘ಮಾತೃ ಮಂದಿರ’, ಮಕ್ಕಳಿಗಾಗಿ ‘ಶ್ರೀ ಶಾರದಾ ಮಂದಿರ’ ಹಾಗೂ ಒಂದು ಅನಾಥಾಲಯವನ್ನು ನಡೆಸುತ್ತಿವೆ.

### ಕರ್ನಾಟಕದಲ್ಲಿನ ಶಾಖೆಗಳು

ಕರ್ನಾಟಕದಲ್ಲಿ ಎರಡು ಶಾಖೆಗಳು ಹಾಗೂ ಒಂದು ಗ್ರಾಮೀಣ ಅಭಿವೃದ್ಧಿ ಯೋಜನೆಯ ಕೇಂದ್ರವಿದೆ.

### ೧. ಶ್ರೀ ಶಾರದಾ ಮಠ, ಬೆಂಗಳೂರು

**ಬೆಂಗಳೂರಿನಲ್ಲಿ ಶಾರದಾ ಸಮಿತಿ:** ೧೯೬೦ರಿಂದಲೂ ಬೆಂಗಳೂರಿನಲ್ಲಿ ಶ್ರೀ ಶಾರದಾಮಠದ ಶಾಖೆಯೊಂದಕ್ಕಾಗಿ ಭಕ್ತರು ಬಹಳವಾಗಿ ಹಂಬಲಿಸುತ್ತಿದ್ದರು. ಕೆಲವು ಮಹಳಾ ಭಕ್ತರಿಗೆ ಪ್ರವ್ರಾಜಿಕಾ ಆತ್ಮಪ್ರಾಣಾ ಮಾತಾಜಿಯವರು (ಮುಂದೆ ದೆಹಲಿ ಶಾಖೆಯ ಅಧ್ಯಕ್ಷರು ಹಾಗೂ ‘ಸಂವಿತ್’ ಪತ್ರಿಕೆಯ ಸಂಪಾದಕರು) ‘ಶಾರದಾ ಸಮಿತಿ’ಯೊಂದನ್ನು ರಚಿಸಲು ಸಲಹೆ ನೀಡಿದರು.

ಭಕ್ತೆಯಾದ ಶ್ರೀಮತಿ ಅನಸೂಯ ಸುಬ್ರಹ್ಮಣ್ಯಂ ಮುಂದೆ ಬಂದು ಮಲ್ಲೇಶ್ವರಂನ ತಮ್ಮ ಮನೆಯನ್ನೇ ಸಮಿತಿಯ ಕಾರ್ಯಕಲಾಪಗಳಿಗಾಗಿ ಮೀಸಲಾಗಿಟ್ಟರು. ಇಲ್ಲಿಗೆ ಚೆನ್ನೈನಿಂದ ಪೂಜ್ಯ ನಿರ್ಭಯಪ್ರಾಣಾ ಮಾತಾಜಿಯವರು ಆಗಾಗ ಬಂದು ಸತ್ಸಂಗ ಕಾರ್ಯಕ್ರಮವನ್ನು ನಡೆಸುತ್ತಿದ್ದರು. ಇದರಿಂದ ಅನೇಕ ಯುವತಿಯರು ಹಾಗೂ ಭಕ್ತರು ಆಕರ್ಷಿತರಾಗಿದ್ದರು. ೧೯೭೪ರಲ್ಲಿ ಶ್ರೀಮತಿ ಮೀನಾಕ್ಷಿ ಶಿವರಾಮಕೃಷ್ಣನ್‌ರವರು ಅನಸೂಯ ಅವರೊಂದಿಗೆ ಸೇರಿ ಕೊಲ್ಕತ್ತಾದಲ್ಲಿನ ಮೂಲಕೇಂದ್ರಕ್ಕೆ ಬೆಂಗಳೂರಿನಲ್ಲಿ ಒಂದು ಶಾಖೆ ತೆರೆಯಲು ಅನುಮತಿ ಬೇಡಿ ಒಂದು ಪತ್ರ ಬರೆದರು.

**ಉದ್ಘಾಟನೆ:** ಮಹಿಳಾ ಭಕ್ತರ ಒಂದುವರೆ ದಶಕದ ಪ್ರಯತ್ನ ಹಾಗೂ ತೀವ್ರ ಹಂಬಲವೂ ಸೇರಿ, ೧೯೭೫ರ ಜನವರಿ ೧೮ನೇ ದಿನಾಂಕ, ಸ್ವಾಮಿ ಶಾರದಾನಂದರ ಜಯಂತಿಯಂದು ಶ್ರೀಮತಿ ಅನಸೂಯ ಸುಬ್ರಹ್ಮಣ್ಯಂರವರ ಹೊರಮನೆಯಲ್ಲಿ ಶ್ರೀ ಶಾರದಾ ಮಠದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಪೂಜ್ಯ ಪ್ರವ್ರಾಜಿಕಾ ಮುಕ್ತಿಪ್ರಾಣಾ ಮಾತಾಜಿ ಮತ್ತು ಚೆನ್ನೈ ಶಾಖೆಯ ಅಧ್ಯಕ್ಷರಾಗಿದ್ದ ಪೂಜ್ಯ ಪ್ರವ್ರಾಜಿಕಾ ನಿರ್ಭಯಪ್ರಾಣಾ ಮಾತಾಜಿಯವರ ದಿವ್ಯ ಸಾನಿಧ್ಯದಲ್ಲಿ ಶ್ರೀಶಾರದಾ ಮಠವನ್ನು ಉದ್ಘಾಟಿಸಲಾಯಿತು.

ಮೂವರು ಸದಸ್ಯರನ್ನೊಳಗೊಂಡ ಈ ಮಠವು ನಿತ್ಯಪೂಜೆ, ಭಜನೆ, ಪ್ರವಚನ, ಬಾಲಮಂದಿರ ತರಗತಿಗಳನ್ನು ನಡೆಸುತ್ತಿತ್ತು. ದಿನೇ ದಿನೇ ವೃದ್ಧಿಸುತ್ತಿದ್ದ ಭಕ್ತರ ಸಂಖ್ಯೆಯಿಂದಾಗಿ ಸ್ಥಳದ ಅಭಾವ ಭಾಸವಾಗತೊಡಗಿತು. ಆದ್ದರಿಂದ ಜಯಂತ್ಯುತ್ಸವಗಳನ್ನು ಮಲ್ಲೇಶ್ವರದ ೧೫ನೇ ಅಡ್ಡರಸ್ತೆಯಲ್ಲಿರುವ ‘ಸೇವಾಸದನ’ದಲ್ಲಿ ಆಚರಿಸಲಾಗುತ್ತಿತ್ತು. ಮಠವು ಪ್ರಾರಂಭವಾದ ವರ್ಷದಲ್ಲೇ ಈ ಮಹಾಸಂಘದ ಎರಡನೇ ಅಧ್ಯಕ್ಷರಾದ ಪೂಜನೀಯ ಪ್ರವ್ರಾಜಿಕಾ ಮೋಕ್ಷಪ್ರಾಣಾ ಮಾತಾಜಿಯವರು ಬೆಂಗಳೂರಿಗೆ ಆಗಮಿಸಿ, ಹಲವರಿಗೆ ಮಂತ್ರದೀಕ್ಷೆಯನ್ನಿತ್ತರು.

೧೯೭೬ರಲ್ಲಿ ಮಠವು ಮಲ್ಲೇಶ್ವರದ ನಾಲ್ಕನೇ ಅಡ್ಡ ರಸ್ತೆಯಲ್ಲಿರುವ ಡಾ. ಬೊಂಡಾಡೆಯವರ ಮನೆಗೆ ಸ್ಥಳಾಂತರಗೊಂಡಿತು. ಮುಂದಿನ ಐದು ವರ್ಷಗಳು ಇಲ್ಲಿಂದಲೇ ಮಠವು ತನ್ನ ಚಟುವಟಿಕೆಗಳನ್ನು ಮುಂದುವರೆಸಿತು.

**ಸ್ವಂತ ನೆಲೆ**: ಆಗಿನ ಕಂದಾಯ ಮಂತ್ರಿಗಳಾಗಿದ್ದ ಶ್ರೀಯುತ ಹುಚ್ಚ ಮಾಸ್ತಿಗೌಡರು ಹಾಗೂ ಕಾನೂನು ಕಾರ್ಯದರ್ಶಿಗಳಾಗಿದ್ದ ಎನ್.ಡಿ.ವೆಂಕಟೇಶ್‌ರವರ ನಿರಂತರ ಪ್ರಯತ್ನದಿಂದ ಕರ್ನಾಟಕ ಸರ್ಕಾರವು ೪.೦೭ ಎಕರೆ ವಿಸ್ತೀರ್ಣವುಳ್ಳ ‘ಪುಟ್ ಖರಾಬ್’ (ಎಂದರೆ ನೀರು ನಿಲ್ಲುವ ಬಂಡೆ ನೆಲ) ಭೂಮಿಯನ್ನು ಮಠಕ್ಕೆ ದಾನವಾಗಿ ಕೊಟ್ಟಿತು. ಇದನ್ನು ವಾಸಯೋಗ್ಯವಾಗಿಸಲು ಹಲವಾರು ವರ್ಷಗಳ ಬಹಳಷ್ಟು ಪರಿಶ್ರಮ ಪಡಬೇಕಾಯಿತು.

ಸೆಪ್ಟೆಂಬರ್ ೫, ೧೯೭೭ರಲ್ಲಿ ಶ್ರೀರಾಮಕೃಷ್ಣ ಮಹಾಸಂಘದ ಹತ್ತನೇ ಅಧ್ಯಕ್ಷರೂ, ಶ್ರೀಮಾತೆ ಶಾರದಾದೇವಿಯವರ ಶಿಷ್ಯರೂ ಆಗಿದ್ದ ಸ್ವಾಮಿ ವೀರೇಶ್ವರಾನಂದರು ಮಠದ ಪೂಜಾಗೃಹಕ್ಕೆ ಅಸ್ತಿಭಾರವನ್ನು ಹಾಕಿದರು. ಮಠವು ತನ್ನ ಸ್ವಂತ ನೆಲೆಗೆ ೧೨ನೇ ಆಗಸ್ಟ್ ೧೯೮೧ರಲ್ಲಿ ಬಂದು ನೆಲೆಸಿತು. ಶ್ರೀಶಾರದಾ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದ ಪೂಜನೀಯ ಪ್ರವ್ರಾಜಿಕಾ ಮೋಕ್ಷಪ್ರಾಣಾ ಮಾತಾಜಿಯವರು ದಿವ್ಯತ್ರಯರ ಭಾವಚಿತ್ರಗಳನ್ನು ಗರ್ಭಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಿ, ಉದ್ಘಾಟನೆಯನ್ನು ನೆರವೇರಿಸಿದರು. ಸಮಾರಂಭದಲ್ಲಿ ಅನೇಕ ಸಂನ್ಯಾಸಿನಿಯರೂ, ಭಕ್ತರೂ, ಹಿತೈಷಿಗಳೂ ಸೇರಿದ್ದರು. ಹಲವಾರು ಅಲಂಕೃತ ಪೆಂಡಾಲುಗಳನ್ನು ನಿರ್ಮಿಸಲಾಗಿತ್ತು. ಅಂದಿನಿಂದ ಈ ಮಠವು ಹಲವಾರು ಸೇವಾಕ್ಷೇತ್ರಗಳಲ್ಲಿ ಕಾರ್ಯೋನ್ಮುಖವಾಗಿದೆ. ದಿವ್ಯತ್ರಯರ ನಿತ್ಯಪೂಜೆ, ಸಂಜೆಯ ಆರಾತ್ರಿಕ, ಏಕಾದಶಿಯಂದು ಶ್ರೀರಾಮನಾಮ ಸಂಕೀರ್ತನೆ, ದಿವ್ಯತ್ರಯರ ಜಯಂತ್ಯುತ್ಸವಗಳು, ಶರನ್ನವರಾತ್ರಿಗಳಲ್ಲಿ ಶ್ರೀದುರ್ಗಾ ಸಪ್ತಶತೀ ಪಾರಾಯಣ, ವಿಶೇಷ ಹಬ್ಬಗಳ ಆಚರಣೆ ಹಾಗೂ ಶಂಕರಾಚಾರ್ಯ, ಬುದ್ಧ ಮುಂತಾದವರುಗಳ ಜಯಂತಿಯನ್ನು ಆಚರಿಸುತ್ತದೆ. ವಾರದಲ್ಲಿ ಒಂದು ಭಜನೆಯ ತರಗತಿ ಹಾಗೂ ನಾಲ್ಕು ಪ್ರವಚನಗಳಿರುತ್ತವೆ. ಆಗಾಗ್ಗೆ ಭಕ್ತರಿಗೆ ಆಧ್ಯಾತ್ಮಿಕ ಶಿಬಿರ, ವಿದ್ಯಾರ್ಥಿಗಳಿಗೆ ಯುವ ಸಮ್ಮೇಳನ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ.

ಪ್ರತಿವರ್ಷ ರಾಷ್ಟ್ರೀಯ ಯುವದಿನವಾದ ಜನವರಿ ೧೨ರಂದು ನಡೆಯುವ ಯುವ–ಸಮ್ಮೇಳನದಲ್ಲಿ ಸರಾಸರಿ ೧೬ ಶಾಲಾ ಕಾಲೇಜುಗಳಿಂದ ೭೦೦ – ೮೦೦ ವಿದ್ಯಾರ್ಥಿನಿಯರು ಪಾಲ್ಗೊಳ್ಳುತ್ತಾರೆ.

### ನಿವೇದಿತಾ ವಿದ್ಯಾಪೀಠ – ಉಚಿತ ಪ್ರಾಥಮಿಕ ಶಾಲೆ

ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗಾಗಿ ಈ ಶಾಲೆಯನ್ನು ೧೯೮೨ರಲ್ಲಿ ಮಠದ ಆವರಣದಲ್ಲಿ ಪ್ರಾರಂಭಿಸಲಾಯಿತು. ಪೂರ್ವ ಪ್ರಾಥಮಿಕದಿಂದ ೫ನೇ ತರಗತಿಯವರೆಗೆ ವಿದ್ಯಾಭ್ಯಾಸ ನೀಡುವ ಕನ್ನಡ ಮಾಧ್ಯಮದ ಶಾಲೆಯಿದು. ಕೊಡುಗೈ ದಾನಿಗಳಿಂದ ನಡೆಯುತ್ತಿರುವ ಈ ಶಾಲೆಯಲ್ಲಿ ಮಕ್ಕಳಿಗೆ ಉಚಿತ ಊಟ,



ನಿವೇದಿತಾ ವಿದ್ಯಾಪೀಠ, ಶ್ರೀಶಾರದಾ ಮಠ, ಬೆಂಗಳೂರು

ಸಮವಸ್ತ್ರ, ಪುಸ್ತಕ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ೫ನೇ ತರಗತಿ ಪೂರೈಸಿದ ಮಕ್ಕಳನ್ನು ಮುಂದಿನ ವಿದ್ಯಾರ್ಜನೆಗಾಗಿ ಬೇರೆ ಶಾಲೆಗಳಿಗೆ ಕಳುಹಿಸಲಾಗುತ್ತದೆ. ಅವರುಗಳಿಗೆ ೧೦ನೇ ತರಗತಿಯವರೆಗೆ ಧನಸಹಾಯ ಒದಗಿಸಿ, ಬುದ್ಧಿವಂತ ವಿದ್ಯಾರ್ಥಿಗಳಿಗೆ ಕಾಲೇಜು ವಿದ್ಯಾರ್ಜನೆಗಾಗಿ ಧನಸಹಾಯ ನೀಡಲಾಗುತ್ತಿದೆ. ಸ್ವಾಮಿ ವಿವೇಕಾನಂದರು ಬಯಸಿದಂತಹ ವಿದ್ಯಾಭ್ಯಾಸ ಪಡೆದ ಈ ವಿದ್ಯಾರ್ಥಿಗಳು ಉತ್ತಮ ಹಾಗೂ ಪ್ರಾಮಾಣಿಕ ಪ್ರಜೆಗಳಾಗಿದ್ದಾರೆ ಎಂಬುದು ಹೆಮ್ಮೆಯ ಸಂಗತಿ.

ಶಾಲೆಯಲ್ಲಿ ಪಠ್ಯವಷ್ಟೇ ಅಲ್ಲದೆ ಯೋಗಾಸನ, ನೃತ್ಯ, ಭಜನೆ, ಹೊಲಿಗೆ ಮುಂತಾದ ತರಗತಿಗಳು ಇರುತ್ತವೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿಗಳ ಮೂಲಕ ತರಬೇತಿ ನೀಡಲಾಗುತ್ತದೆ. ಮಕ್ಕಳು ಸದಾ ಎದುರು ನೋಡುವ 'ಪ್ರವಾಸ'ಕ್ಕೆ ವರ್ಷಕ್ಕೊಮ್ಮೆ ಕರೆದೊಯ್ಯಲಾಗುತ್ತದೆ. ಒಟ್ಟಿನಲ್ಲಿ ಮಕ್ಕಳ ಸರ್ವಾಂಗೀಣ ಅಭ್ಯುದಯಕ್ಕಾಗಿ ಮಠವು ನಿರಂತರ ಶ್ರಮಿಸುತ್ತಿದೆ.

**ಬಾಲಮಂದಿರ:** ಪ್ರತಿ ಭಾನುವಾರ ೧೦ ರಿಂದ ೧೫ ವರ್ಷದ ಮಕ್ಕಳಿಗೆ ಆಧ್ಯಾತ್ಮಿಕ, ನೈತಿಕ, ಸಾಂಸ್ಕೃತಿಕ, ಮೌಲ್ಯಗಳನ್ನು ಕೊಡುವ ತರಗತಿಗಳನ್ನು ನಡೆಸಲಾಗುತ್ತದೆ. ಇದಕ್ಕೆ ಮಠದ ಶಾಲೆಯ ಮಕ್ಕಳಲ್ಲದೆ ಸುತ್ತಮುತ್ತಲಿನ ಮಕ್ಕಳೂ ಸಹ ಭಾಗವಹಿಸುತ್ತಾರೆ. ಮಕ್ಕಳಿಗೆ ಭಾರತದ ಭವ್ಯ ಪರಂಪರೆ, ಇತಿಹಾಸ, ಮೌಲ್ಯಗಳ ಬಗ್ಗೆ ತಿಳುವಳಿಕೆ ಮೂಡಿಸಿ ರಾಷ್ಟ್ರೀಯ ಭಾವನೆಗಳನ್ನೂ ಜಾಗ್ರತಗೊಳಿಸಲಾಗುತ್ತದೆ. ಬೇಸಿಗೆ ಶಿಬಿರವನ್ನು ಸಹ ನಡೆಸಲಾಗುತ್ತದೆ. ಮಕ್ಕಳ ಚಾರಿತ್ರ್ಯವನ್ನು ರೂಪಿಸುವುದೇ ಈ ಶಿಬಿರದ ಮುಖ್ಯ ಉದ್ದೇಶವಾಗಿದೆ.

ಮಠದ ಪೂರ್ವಕ್ಕೆ ಒಂದು ಕಲ್ಯಾಣಿ ಇದ್ದು, ಇದರ ಮಧ್ಯದಲ್ಲಿ ಶಿವಲಿಂಗದ ಸ್ಥಾಪನೆಯಾಗಿದೆ. ಈ ಪ್ರಶಾಂತ ಸ್ಥಳವು ಭಕ್ತರ ಪ್ರಿಯ ತಾಣವಾಗಿದೆ.

**ಗ್ರಂಥಾಲಯ ಮತ್ತು ಪುಸ್ತಕ ಮಳಿಗೆ :** ದಿವ್ಯತ್ರಯರ ಜೀವನಕ್ಕೆ ಸಂಬಂಧಪಟ್ಟ ಪುಸ್ತಕಗಳು, ಹಿಂದೂ ಧರ್ಮ ಮತ್ತು ಆಧ್ಯಾತ್ಮಿಕ ತತ್ತ್ವಗಳನ್ನೊಳಗೊಂಡ ಸುಮಾರು ೩೦೦೦ ಪುಸ್ತಕಗಳು ಒಂದು ಉತ್ತಮ ಗ್ರಂಥಾಲಯವನ್ನು ಓದುಗರ ಸೌಲಭ್ಯಕ್ಕಾಗಿ ತೆರೆದಿದೆ. ಹಾಗೂ ಸದಸ್ಯತ್ವ ಹೊಂದಿದವರು ೧೫ ದಿನಗಳ ಮಟ್ಟಿಗೆ ಪುಸ್ತಕಗಳನ್ನು ಮನೆಗೆ ಕೊಂಡೊಯ್ಯಬಹುದು. ರಾಮಕೃಷ್ಣ-ವಿವೇಕಾನಂದ ಸಾಹಿತ್ಯದ ಪುಸ್ತಕಗಳನ್ನು ಮಳಿಗೆಯಲ್ಲಿ ಮಾರಾಟ ಮಾಡಲಾಗುತ್ತದೆ.

**ಉಚಿತ ಚಿಕಿತ್ಸಾಲಯ :** ಬಡಹೆಂಗಸರು, ಮಕ್ಕಳು ಮತ್ತು ನಿವೇದಿತಾ ಶಾಲೆಯ ವಿದ್ಯಾರ್ಥಿಗಳ ಚಿಕಿತ್ಸೆಗಾಗಿ ೨೦೦೩ರಿಂದ ಇದನ್ನು ನಡೆಸಲಾಗುತ್ತಿದೆ. ವಾರಕ್ಕೆರಡು ದಿನ ಭಕ್ತ ವೈದ್ಯರು ತಮ್ಮ ಸೇವೆ ಸಲ್ಲಿಸುತ್ತಾರೆ. ಅಲ್ಲದೆ ಮಠದಲ್ಲಿ ದಂತ ಶಿಬಿರಗಳೂ ನೇತ್ರ ಶಿಬಿರಗಳೂ ಚರ್ಮರೋಗ ಶಿಬಿರಗಳೂ ಕಾಲಕಾಲಕ್ಕೆ ನಡೆಯುತ್ತವೆ.

ದಿನೇ ದಿನೇ ವೃದ್ಧಿಸುತ್ತಿದ್ದ ಭಕ್ತರ ಸಂಖ್ಯೆಯಿಂದಾಗಿ ದೇವಾಲಯವನ್ನು ವಿಸ್ತರಿಸಲಾಗಿದೆ. ೨೦೧೪ರ ಮೇ ೨, ಅಕ್ಷಯ ತೃತೀಯಾ ದಿನದಂದು ಈ ಮಹಾಸಂಘದ ಅಧ್ಯಕ್ಷರಾದ ಪೂಜನೀಯ ಪ್ರವ್ರಾಜಿಕಾ ಭಕ್ತಿಪ್ರಾಣಾ ಮಾತಾಜಿಯವರಿಂದ ದೇವಾಲಯದ ಉದ್ಘಾಟನೆ ನೆರವೇರಿತು.

೨೦೧೯ರ ನವೆಂಬರಿನಲ್ಲಿ 'ಸೋದರಿ ನಿವೇದಿತಾ ಸಭಾಂಗಣ'ವು ಶ್ರೀಶಾರದಾ ಮಠ ಹಾಗೂ ರಾಮಕೃಷ್ಣ ಶಾರದಾ ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಪ್ರವ್ರಾಜಿಕಾ ಅಮಲಪ್ರಾಣಾ ಮಾತಾಜಿಯವರಿಂದ ಉದ್ಘಾಟಿಸಲ್ಪಟ್ಟಿತು.

**ಜುಂಜರಾಮನಹಳ್ಳಿ: ಗ್ರಾಮೀಣ ಅಭಿವೃದ್ಧಿ ಯೋಜನೆ**

ಡಿಸೆಂಬರ್ ೨೦೦೧ರಲ್ಲಿ ಬೆಂಗಳೂರಿನಿಂದ ಸುಮಾರು ೮೦ ಕಿ.ಮೀ. ದೂರದಲ್ಲಿರುವ, ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಸಿದ್ಧಗಿರಿ (ಸಿದ್ಧರ ಬೆಟ್ಟ) ಎಂಬ ಹಳ್ಳಿಯಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಮತ್ತು ಮಕ್ಕಳ ಪುರೋಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಕಾರ್ಯವನ್ನು ಆರಂಭಿಸಲಾಯಿತು. ಅನೌಪಚಾರಿಕವಾಗಿ ಸಣ್ಣದಾಗಿ ಪ್ರಾರಂಭವಾಗಿದ್ದ ಕಾರ್ಯಗಳು ೨೦೦೫ರಲ್ಲಿ ನಿರ್ದಿಷ್ಟ ರೂಪವನ್ನು ಪಡೆದವು. ಇದೇ ವರ್ಷದಲ್ಲಿ ದಿವ್ಯತ್ರಯರ ಭಕ್ತರಾದ ಶ್ರೀಯುತ ಶ್ರೀನಿವಾಸಯ್ಯನವರು ಸಿದ್ಧಗಿರಿಯಿಂದ ೬ ಕಿ.ಮೀ. ದೂರದಲ್ಲಿರುವ ಜುಂಜರಾಮನ ಹಳ್ಳಿಯಲ್ಲಿ ೩.೨ ಕುಂಟೆ ಜಮೀನನ್ನು ಮಠಕ್ಕೆ ದಾನವಾಗಿ ನೀಡಿದರು. ನಂತರ ಗ್ರಾಮೀಣಾಭಿವೃದ್ಧಿ ಕೇಂದ್ರವನ್ನು ಈ ಸ್ವಂತ ನಿವೇಶನಕ್ಕೆ ವರ್ಗಾಯಿಸಿ ಒಂದು ಶಾಲೆಯನ್ನೂ ಪ್ರಾರಂಭಿಸಲಾಯಿತು.

**ಶ್ರೀಶಾರದಾ ಮಠ ನಿವೇದಿತಾ ವಿದ್ಯಾಪೀಠ**

ಜುಂಜರಾಮನಹಳ್ಳಿಯ ಈ ಶಾಲೆಯು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿರುವ ಕನ್ನಡ ಮಾಧ್ಯಮದ ಉಚಿತ ಪ್ರಾಥಮಿಕ ಶಾಲೆಯಾಗಿದೆ. ಗಂಡು ಹಾಗೂ ಹೆಣ್ಣು ಮಕ್ಕಳು ಇಬ್ಬರೂ ಇಲ್ಲಿ ಪೂರ್ವ ಪ್ರಾಥಮಿಕದಿಂದ ಐದನೇ ತರಗತಿಯವರೆಗೆ ಓದಲು ಅವಕಾಶವಿದೆ. ಸುತ್ತಮುತ್ತಲ ಹಳ್ಳಿಗಳ ಮಕ್ಕಳಿಗಾಗಿಯೇ ಇರುವ ಈ ಶಾಲೆಯಲ್ಲಿ ಇವೆಲ್ಲವೂ ಉಚಿತ : ಶಿಕ್ಷಣ, ಪುಸ್ತಕಗಳು, ಮಧ್ಯಾಹ್ನದ ಊಟ, ಸಂಜೆಯ ಪೌಷ್ಟಿಕ-ಪೇಯ, ಚ್ಯವನಪ್ರಾಶ ಇತ್ಯಾದಿ. ಮಕ್ಕಳ ಜನ್ಮದಿನಗಳಂದು ಪಾಯಸವೂ ಇರುತ್ತದೆ. ವರ್ಷಕ್ಕೊಮ್ಮೆ ಇಲ್ಲಿನ ಮಕ್ಕಳನ್ನು ಶೈಕ್ಷಣಿಕ ಪ್ರವಾಸಕ್ಕಾಗಿ ಕರೆದೊಯ್ಯಲಾಗುತ್ತದೆ. ಇಲ್ಲಿನ ಮಕ್ಕಳನ್ನು ಇತರ ಶಾಲೆಗಳಲ್ಲಿ ನಡೆಯುವ ವಿವಿಧ ಸ್ಪರ್ಧೆಗಳಿಗೆ ತರಬೇತಿ ನೀಡಿ ಕಳುಹಿಸಲಾಗುತ್ತದೆ. ಪಟ್ಟಣದ ಮಕ್ಕಳಿಗೆ ಕಡಿಮೆ ಇಲ್ಲದಂತೆ ಇವರು ಬಹುಮಾನಗಳನ್ನೂ ಪಡೆದಿದ್ದಾರೆ.



ಶ್ರೀಶಾರದಾ ಮಠ ನಿವೇದಿತಾ ವಿದ್ಯಾಪೀಠ , ಜುಂಜರಾಮನಹಳ್ಳಿ

ಶಾಲೆಯಲ್ಲಿ ರಾಷ್ಟ್ರೀಯ ಹಬ್ಬ ಹಾಗೂ ಜಯಂತಿಗಳನ್ನು ಆಚರಿಸಲಾಗುತ್ತದೆ. ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ಏರ್ಪಡಿಸುವ ಪ್ರದರ್ಶನವನ್ನು ನೋಡಲು ಪೋಷಕರು, ವಿವಿಧ ಶಾಲೆಯ ವಿದ್ಯಾರ್ಥಿಗಳು ಉತ್ಸಾಹದಿಂದ ಬರುತ್ತಾರೆ.

ಇದಲ್ಲದೆ ದಿವ್ಯತ್ರಯರ ಭಾವಪ್ರಚಾರ ಕಾರ್ಯಕ್ಕಾಗಿ ಸುತ್ತಮುತ್ತಲ ಹಳ್ಳಿಯ ಶಾಲಾಮಕ್ಕಳಿಗೆ ಪ್ರತಿ ವರ್ಷ ಲಿಖಿತ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ವಿತರಿಸಲಾಗುತ್ತದೆ. ಕಾಲೇಜು ವಿದ್ಯಾರ್ಥಿನಿಯರಿಗಾಗಿ 'ನಿವೇದಿತಾ ವಿದ್ಯಾರ್ಥಿನಿ ವೇತನ'ವನ್ನು ಸಹ ವಿತರಿಸಲಾಗುತ್ತದೆ. ವಿದ್ಯಾರ್ಥಿಗಳು ಈ ವೇತನಕ್ಕೆ ಆಯ್ಕೆಯಾಗಲು ದಿವ್ಯತ್ರಯರ ಜೀವನ ಹಾಗೂ ವಿಚಾರಗಳನ್ನು ಕುರಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗುತ್ತದೆ.

ಪ್ರತಿವರ್ಷ ಮಕ್ಕಳ ವ್ಯಕ್ತಿತ್ವ ವಿಕಸನಕ್ಕಾಗಿ 'ಬೇಸಿಗೆ ಶಿಬಿರ'ವನ್ನು ಏರ್ಪಡಿಸಲಾಗುತ್ತದೆ. ಈ ಶಿಬಿರಗಳು ಮಕ್ಕಳನ್ನು ಅದೆಷ್ಟು ಆಕರ್ಷಿಸುವುದೆಂದರೆ ಅವರು ಈ ಶಿಬಿರಕ್ಕಾಗಿ ಹಾತೊರೆಯುತ್ತಿರುತ್ತಾರೆ. ಶಾಲಾರಂಭದ ಸಮಯದಲ್ಲಿ ಸುತ್ತಮುತ್ತಲ ಶಾಲಾ ಮಕ್ಕಳಿಗೆ ಪ್ರತಿ ವರ್ಷ ಬರೆಯುವ ಪುಸ್ತಕಗಳನ್ನು ವಿತರಿಸಲಾಗುತ್ತದೆ.

**ನಿವೇದಿತಾ ಚಿಕಿತ್ಸಾಲಯ :** ಸುತ್ತಮುತ್ತಲ ಗ್ರಾಮೀಣ ಜನರ ಅನುಕೂಲಕ್ಕಾಗಿ 'ನಿವೇದಿತಾ ಚಿಕಿತ್ಸಾಲಯ'ವನ್ನು ಪ್ರಾರಂಭಿಸಲಾಯಿತು. ಹದಿನೈದು ದಿನಗಳಿಗೊಮ್ಮೆ ಉಚಿತ ಆರೋಗ್ಯ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ೨೦೦೮ರಿಂದಲೂ ಉಚಿತ ನೇತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಲಾಗುತ್ತಿದೆ. ಸುಮಾರು ನೂರು ಜನ ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಮತ್ತು ಮೂರು ತಿಂಗಳಿಗೊಮ್ಮೆ ಈ ಶಿಬಿರಗಳು ನಡೆಯುತ್ತದೆ. ಕಾಲಕಾಲಕ್ಕೆ ಚರ್ಮ ಆರೋಗ್ಯ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ.

**ಸ್ವಾವಲಂಬಿ ಬದುಕು :** ''ಜನರಿಗೆ ಸ್ವಾವಲಂಬಿಗಳಾಗಲು ತಿಳಿಸದಿದ್ದಲ್ಲಿ ಇಡೀ ಜಗತ್ತಿನ ಎಲ್ಲಾ ಸಂಪತ್ತೂ ಕೂಡ ಭರತಖಂಡದ ಒಂದು ಚಿಕ್ಕ ಹಳ್ಳಿಗೆ ಸಹಾಯ ನೀಡಲೂ ಸಾಕಾಗಲಾರದು'' *(ಕೃತಿ ಸಂ - ೬, ಪು.೯೭)* ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಇಲ್ಲಿನ ಗ್ರಾಮೀಣ ಮಹಿಳೆಯರಿಗೆ ಕಸೂತಿ, ಬಟ್ಟೆ ಹೊಲಿಯುವುದು, ಸೀರೆಯ ಸೆರಗಿಗೆ ಕುಚ್ಚು ಕಟ್ಟುವುದು ಇತ್ಯಾದಿ ಕೆಲಸಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಇದರ ಪ್ರಯೋಜನ ಪಡೆದ ಅನೇಕ ಮಹಿಳೆಯರು ಈಗ ಸ್ವಾವಲಂಬಿಗಳಾಗಿ ಜೀವನ ನಡೆಸುತ್ತಿರುವರು.

ವಯಸ್ಸಾದ, ಒಬ್ಬಂಟಿಗರಾದ ಮಹಿಳೆಯರನ್ನೂ, ಅಸಹಾಯಕ ಕುಟುಂಬಗಳನ್ನು ಗುರುತಿಸಿ ಅವರಿಗೆ ತಿಂಗಳ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ. ಪ್ರತಿ ತಿಂಗಳು ಮೂವತ್ತು ಬಡ ಕುಟುಂಬಗಳು ಇದರ ಪ್ರಯೋಜನವನ್ನು ಪಡೆಯುತ್ತಿವೆ.

ಹಳ್ಳಿಯ ಜನರ ಅಗತ್ಯಗಳನ್ನು ಮನಗಂಡು ನೀರು ಸಂಗ್ರಹಿಸಲು ಡ್ರಮ್‌ಗಳನ್ನು ನೀಡಲಾಗಿದೆ. ಮಳೆ ಮಳೆ ನೀರನ್ನು ಸಂಗ್ರಹಿಸಲು ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಕೊಡಲಾಗಿದೆ. ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುವಂತೆ ಸೌರದೀಪಗಳು ಹಾಗೂ ಇನ್‌ವರ್ಟರ್ ಎಲ್.ಇ.ಡಿ. ಬಲ್ಬ್‌ಗಳನ್ನು ವಿತರಿಸಲಾಗಿದೆ.

ಸುತ್ತಮುತ್ತಲ ಹಳ್ಳಿಗರಿಗೆ ಈಗ ಶ್ರೀ ಶಾರದಾ ಮಠವು ಭರವಸೆ, ನೆಮ್ಮದಿ, ಸಮಾಧಾನದ ತಾಣವಾಗಿದೆ. ಈಗ ದಿವ್ಯತ್ರಯರು ಇಲ್ಲಿ ಅನೇಕರಿಗೆ ಪರಿಚಿತರಾಗಿದ್ದಾರೆ.

## ೨. ಶ್ರೀ ಶಾರದಾ ಮಠ, ಚಿಕ್ಕಮಗಳೂರು

**ಮಲೆನಾಡಿನ ಮಡಿಲಲ್ಲಿ ಶ್ರೀಶಾರದಾ ಮಠ :** ಮಲೆನಾಡಿನ ಮಡಿಲಾದ ಚಿಕ್ಕಮಗಳೂರಿನ ಸಸ್ಯಶ್ಯಾಮಲ ಗಿರಿಶೃಂಗ ಶೋಭಿತ ನಿಸರ್ಗ ರಮಣೀಯ ತಾಣದಲ್ಲಿ ಕರ್ನಾಟಕದ ಎರಡನೇ ಶಾಖೆ ಪ್ರಾರಂಭವಾಯಿತು.

**ಸೇವಾ ಟ್ರಸ್ಟ್:** ೨೦೦೧ ರಿಂದಲೂ ಚಿಕ್ಕಮಗಳೂರಿನ ಭಕ್ತರು ಅಲ್ಲಿ ಶ್ರೀಶಾರದಾ ಮಠದ ಶಾಖೆಯೊಂದನ್ನು ತೆರೆಯಬೇಕೆಂದು ದಕ್ಷಿಣೇಶ್ವರದ ಮಠಕ್ಕೆ ಮನವಿ ಸಲ್ಲಿಸುತ್ತಿದ್ದರು. ೨೦೦೩ರಲ್ಲಿ ಶ್ರೀಮತಿ ವಾಸಂತಿ ಗಂಗಯ್ಯ ಹೆಗಡೆಯವರ ನೇತೃತ್ವದಲ್ಲಿ ಭಕ್ತರು ಶ್ರೀರಾಮಕೃಷ್ಣ ಶಾರದಾದೇವೀ ಸೇವಾ ಟ್ರಸ್ಟ್ ಅನ್ನು ಪ್ರಾರಂಭಿಸಿದರು. ಈ ಟ್ರಸ್ಟ್, ಶ್ರೀ ಧರ್ಮರಾಜ್ ಎಂಬುವರು ಬಿಟ್ಟುಕೊಟ್ಟಿದ್ದ ಮನೆಯೊಂದರಲ್ಲಿ ಸತ್ಸಂಗ, ಗೀತಾ ತರಗತಿಗಳು ಮುಂತಾದ ಚಟುವಟಿಕೆಗಳನ್ನು ನಡೆಸುತ್ತಿತ್ತು.

ಚಿಕ್ಕಮಗಳೂರಿನ ಹೊರವಲಯದಲ್ಲಿರುವ ಆದಿಶಕ್ತಿನಗರದಲ್ಲಿ ನಾಲ್ಕು ಎಕರೆ ಜಮೀನನ್ನು ಈ ಸೇವಾ ಟ್ರಸ್ಟ್ ಸರ್ಕಾರದಿಂದ



ಶ್ರೀಶಾರದಾ ಮಠ, ಚಿಕ್ಕಮಗಳೂರು

ಗುತ್ತಿಗೆಗೆ(ಲೀಸ್) ಪಡೆದು, ೧೧ನೇ ಫೆಬ್ರವರಿ ೨೦೦೫ರಂದು ಗುದ್ದಲಿ ಪೂಜೆಯನ್ನು ನೆರವೇರಿಸಿತು. ಈ ಕಾರ್ಯಕ್ರಮಕ್ಕೆ ಬೆಂಗಳೂರು ಶ್ರೀಶಾರದಾಮಠದ ಅಧ್ಯಕ್ಷರಾದ ಪೂಜ್ಯ ಶುಭ್ರಪ್ರಾಣಾ ಮಾತಾಜಿಯವರು ಆಗಮಿಸಿದ್ದರು.

೯ನೇ ಮಾರ್ಚ್ ೨೦೦೭ರಂದು ಈ ನಿವೇಶನದಲ್ಲಿ ಸುಂದರವಾದ ದೇವಾಲಯ ಮತ್ತು ಇನ್ನಿತರ ಕಟ್ಟಡಗಳ ಉದ್ಘಾಟನೆ ಸಮಾರಂಭವು ಬಹಳ ಅದ್ದೂರಿಯಿಂದ ಜರುಗಿತು. ಗಣಹೋಮ, ವಾಸ್ತು ಹೋಮ, ಸುದರ್ಶನ ಹೋಮಗಳೊಂದಿಗೆ ಕಳಸ ಪ್ರತಿಷ್ಠಾಪನೆಯೂ ನೆರವೇರಿತು. ಪೂಜೆ, ಭಜನೆ, ಲಲಿತಾಸಹಸ್ರನಾಮ ಪಾರಾಯಣ ಎಲ್ಲವೂ ಸೇರಿ ಅಮೋಘವಾದ ಆಧ್ಯಾತ್ಮಿಕ ವಾತಾವರಣ ಸೃಷ್ಟಿಯಾಗಿತ್ತು. ಶ್ರೀಶಾರದಾಮಠದ ಪ್ರಧಾನ ಕಾರ್ಯದರ್ಶಿಗಳಾದ ಪೂಜ್ಯ ಅಮಲಪ್ರಾಣಾ ಮಾತಾಜಿಯವರೂ, ಬೆಂಗಳೂರಿನ ಶಾಖೆಯ ಅಧ್ಯಕ್ಷರು, ಮತ್ತಿತರ ಗಣ್ಯ ವ್ಯಕ್ತಿಗಳು ಈ ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

**ಶ್ರೀಶಾರದಾ ಮಠದ ಆರಂಭ :** ಮಂದಿರದ ಉದ್ಘಾಟನೆಯಾದ ಮೇಲೆ, ಸೇವಾಟ್ರಸ್ಟಿನ ಆಕಾಂಕ್ಷೆಯ ಮೇರೆಗೆ ಮಠದ ಸಂನ್ಯಾಸಿನಿಯರು ಅಲ್ಲಿ ನೆಲೆಸಿ ಪೂಜಾದಿ ಸೇವಾಕಾರ್ಯಗಳನ್ನು ನಡೆಸುತ್ತಿದ್ದರು. ನವೆಂಬರ್ ೨೦೦೮ ರ ವೇಳೆಗೆ ಸೇವಾಟ್ರಸ್ಟ್ ಮಠದ ಹೆಸರಿನಲ್ಲಿ ನಿಗದಿತ ಠೇವಣಿಯನ್ನು ಇಟ್ಟು, ಮಠದ ಸೇವಾ ಕಾರ್ಯಗಳಿಗಾಗಿ ತಿಂಗಳ ದೇಣಿಗೆಯನ್ನು ನೀಡಲಾರಂಭಿಸಿತು.

೨೯ ನವೆಂಬರ್ ೨೦೧೩ ರಂದು ಶ್ರೀರಾಮಕೃಷ್ಣ ಶಾರದಾದೇವಿ ಸೇವಾಟ್ರಸ್ಟಿನಿಂದ ಮಂದಿರ ಹಾಗೂ ಇತರ ಕಟ್ಟಡಗಳನ್ನೊಳಗೊಂಡ ಲೀಸಿನ ಭೂಮಿಯು ಕಲ್ಕತ್ತೆಯ ಶ್ರೀಶಾರದಾ ಮಠದ ಹೆಸರಿಗೆ ವರ್ಗಾವಣೆಯಾಯಿತು. ಮಠದ ಹೆಸರಿಗೆ ಲೀಸ್ ಭೂಮಿಯ ವರ್ಗಾವಣೆಯಾದ ಮೇಲೆ ಇದು ಬೆಂಗಳೂರಿನ ಶ್ರೀಶಾರದಾ ಮಠದ ಉಪಶಾಖೆಯಾಗಿ ಕಾರ್ಯನಿರ್ವಹಿಸತೊಡಗಿತು. ೧ನೇ ಮೇ ೨೦೧೬ ರಿಂದ ಇದನ್ನು ದಕ್ಷಿಣೇಶ್ವರದ ಶಾಖೆ ಎಂದು ಘೋಷಿಸಲಾಯಿತು. ಹೀಗೆ ಪ್ರಸಿದ್ಧ ಚಂದ್ರದ್ರೋಣ ಪರ್ವತದ ತಪ್ಪಲಿನಲ್ಲಿ ಇರುವ ರಮ್ಯವಾದ ಚಿಕ್ಕಮಗಳೂರಿನಲ್ಲಿ ಕರ್ನಾಟಕದ ಶ್ರೀಶಾರದಾಮಠದ ಎರಡನೆಯ ಅಧಿಕೃತ ಶಾಖೆಯು ಸ್ಥಾಪನೆಗೊಂಡಿತು. ಶ್ರೀಶಂಕರರು ಸ್ಥಾಪಿಸಿದ ಶೃಂಗೇರಿಯ ಶಾರದಾ ಪೀಠ ಮತ್ತು ಹೊರನಾಡಿನ ಅನ್ನಪೂರ್ಣೇಶ್ವರಿ ಸನ್ನಿಧಿಯ ಸನಿಹದಲ್ಲಿರುವ ಚಿಕ್ಕಮಗಳೂರಿನಲ್ಲಿ ಶ್ರೀಶಾರದಾ ಮಠವು ಭಕ್ತರಿಗೆ ತೀರ್ಥಸ್ಥಾನವಾಗಿದೆ.

**ಕಾರ್ಯಚಟುವಟಿಕೆಗಳು :** ಹತ್ತಿರದ ಶಾಲೆಗಳಿಗೆ ವಾರಕ್ಕೆರಡು ಬಾರಿ ತೆರಳಿ ಮಕ್ಕಳಿಗೆ ನೈತಿಕ ಮೌಲ್ಯಗಳ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತದೆ. ಮತ್ತು ಪುಟ್ಟ ಮಕ್ಕಳಿಗೆ ಪ್ರತಿ ಭಾನುವಾರ 'ಬಾಲ ಮಂದಿರ'ವೂ ಇದೆ. ಸುತ್ತಮುತ್ತಲ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಪಠ್ಯದ ವಿಶೇಷ ತರಗತಿಗಳನ್ನು ಏರ್ಪಡಿಸುವ ಮೂಲಕ ಅವರ ಪರೀಕ್ಷಾ ಫಲಿತಾಂಶವು ಉತ್ತಮಗೊಂಡಿದೆ. ಅಲ್ಲದೆ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಧನಸಹಾಯವನ್ನು ಮಾಡಲಾಗುತ್ತಿದೆ. ಮಠದ ರಮಣೀಯ ಪ್ರಕೃತಿಯ ಮಡಿಲಿನಲ್ಲಿ ವಿದ್ಯಾರ್ಥಿಗಳಿಗೆ ಆಗಾಗ್ಗೆ ವಿಚಾರ ಸಂಕಿರಣಗಳು, ಅಧ್ಯಯನ ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗುತ್ತದೆ. ೫ನೇ ತರಗತಿಯಿಂದ ೭ನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ಶನಿವಾರ ಮತ್ತು ಭಾನುವಾರಗಳು ಕಂಪ್ಯೂಟರ್ ತರಗತಿಗಳನ್ನು ನಡೆಸಲಾಗುತ್ತಿದೆ.

ಕಾಲೇಜು ವಿದ್ಯಾರ್ಥಿಗಳಿಗೆ ಆಗಾಗ್ಗೆ ಆಧ್ಯಾತ್ಮಿಕ ಶಿಬಿರಗಳನ್ನು ಹಮ್ಮಿಕೊಳ್ಳುವುದರ ಮೂಲಕ ಅವರ ವ್ಯಕ್ತಿತ್ವವನ್ನು ನಮ್ಮ ಸಂಸ್ಕೃತಿಯ ಅಚ್ಚಿನಲ್ಲಿ ರೂಪಿಸಲಾಗುತ್ತಿದೆ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಶ್ರೀರಾಮಕೃಷ್ಣ ಭಾವಧಾರೆಯನ್ನು ಪರಿಚಯಿಸಲು ಲಿಖಿತ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ. ಇಷ್ಟಕ್ಕೆ ಮಠದ ಸೇವಾ ಕಾರ್ಯಗಳು ಸೀಮಿತವಾಗಿಲ್ಲ. ಶಿಕ್ಷಕರನ್ನು ತರಬೇತಿಗೊಳಿಸಲು ಅವರುಗಳಿಗೆ ಪ್ರತ್ಯೇಕ ಶಿಬಿರವನ್ನು ಆಗಾಗ್ಗೆ ಹಮ್ಮಿಕೊಳ್ಳಲಾಗುತ್ತದೆ. ಮಹಿಳೆಯರಿಗೆ ಹಾಗೂ ೧೦ನೇ ತರಗತಿಯವರೆಗೆ ವಿದ್ಯಾಭ್ಯಾಸ ಪೂರೈಸಿರುವ ಹೆಣ್ಣುಮಕ್ಕಳಿಗೆ ಸೋಮವಾರದಿಂದ ಶುಕ್ರವಾರದವರೆಗೆ ಕಂಪ್ಯೂಟರ್ ತರಗತಿ ನಡೆಸಲಾಗುತ್ತಿದೆ.

**ವೈದ್ಯಕೀಯ ಸೇವೆ :** ಮಠ ಪ್ರಾರಂಭವಾದ ದೆಸೆಯಿಂದಲೇ ಒಂದು ಉಚಿತ ಆಯುರ್ವೇದ ಚಿಕಿತ್ಸಾಲಯವು ಕಾರ್ಯನಿರ್ವಹಿಸುತ್ತಿದೆ. ವಾರದಲ್ಲಿ ಮೂರು ದಿನಗಳು ತೆರೆದಿರುವ ಈ ಕ್ಲಿನಿಕ್‌ನಲ್ಲಿ ಮಕ್ಕಳಿಗೆ ಉಚಿತವಾಗಿ ಔಷಧಿಯನ್ನು ನೀಡಲಾಗುತ್ತದೆ. ಆಯುರ್ವೇದ ಶಿಬಿರಗಳು ಹಾಗೂ ತಿಂಗಳಿಗೊಮ್ಮೆ ವಿಶೇಷವಾಗಿ ಗರ್ಭಿಣಿ ಸ್ತ್ರೀಯರಿಗೆ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗುತ್ತದೆ. ಗರ್ಭಿಣಿ ಸ್ತ್ರೀಯರಿಗೆ ಪೌಷ್ಟಿಕ, ಆಹಾರ, ಕ್ಯಾಲ್ಸಿಯಂ ಹಾಗೂ ಫೋಲಿಕ್ ಆಸಿಡ್ ಮಾತ್ರೆಗಳ ವಿತರಣೆ, ನಿಯಮಿತ ಆರೋಗ್ಯ ತಪಾಸಣೆ ಇತ್ಯಾದಿ ನಡೆಸಲಾಗುತ್ತದೆ. ಮಠದಿಂದ ೩ ಕಿ.ಮೀ ದೂರದಲ್ಲಿರುವ ಎರಡು ಹಳ್ಳಿಗಳಲ್ಲಿ ತಿಂಗಳಲ್ಲಿ ನಾಲ್ಕು ಬಾರಿ ಆಯುರ್ವೇದ ಶಿಬಿರವನ್ನು ನಡೆಸುತ್ತಾ ಬಂದಿದೆ.

**ಮಹಿಳೆಯರಿಗಾಗಿ :** ಸ್ವಾವಲಂಬಿ ಜೀವನಕ್ಕೋಸ್ಕರ ಮಹಿಳೆಯರಿಗೆ ವಾರದಲ್ಲಿ ೫ ದಿನಗಳು ಹೊಲಿಗೆ ತರಬೇತಿ ನಡೆಸಲಾಗುತ್ತಿದೆ. ಆರ್ಥಿಕ ಸಹಾಯ ಯಾಚಿಸಿ ಬಂದಂತಹ ಸ್ತ್ರೀಯರಿಗೆ ಧನ, ದವಸ ಧಾನ್ಯ, ವೈದ್ಯಕೀಯ ಸೌಲಭ್ಯ, ಔಷಧಿ ಹೀಗೆ ಅವರ ಅಗತ್ಯಕ್ಕೆ ತಕ್ಕಂತೆ ಸಹಾಯ ಹಸ್ತವನ್ನು ಚಾಚುತ್ತಾರೆ ಈ ಸಂನ್ಯಾಸಿನಿಯರು. ಅಲ್ಲದೆ ಪ್ರತಿ ವರ್ಷವೂ ೩೫ ಬಡ ಮಹಿಳೆಯರಿಗೆ ಬಟ್ಟೆ, ಧವಸ ಧಾನ್ಯಗಳನ್ನು ನೀಡಲಾಗುತ್ತಿದೆ.

**ಇನ್ನಿತರ ಚಟುವಟಿಕೆಗಳು:** ದಿನನಿತ್ಯ ಪೂಜೆ, ಭಜನೆ ಸ್ತೋತ್ರ ಪಠನೆ, ಏಕಾದಶಿಯಂದು ರಾಮನಾಮ ಸಂಕೀರ್ತನೆ, ಎಲ್ಲಾ ಹಬ್ಬಗಳ ಆಚರಣೆ, ಶರನ್ನವರಾತ್ರಿಯಂದು ದುರ್ಗಾಪೂಜೆ, ದಿವ್ಯತ್ರಯರ ಜಯಂತ್ಯೋತ್ಸವಗಳು ಇತ್ಯಾದಿಗಳನ್ನು ಆಚರಿಸಲಾಗುತ್ತದೆ. ಭಕ್ತ ಮಹಿಳೆಯರಿಗೆ ಆಧ್ಯಾತ್ಮಿಕ ಶಿಬಿರಗಳನ್ನು ಏರ್ಪಡಿಸುವ ಮೂಲಕ ಅವರ ಆಧ್ಯಾತ್ಮಿಕ ಹಸಿವನ್ನು ತಣಿಸುತ್ತಿದೆ.

ಹೀಗೆ ಸ್ವಾಮಿ ವಿವೇಕಾನಂದ ಪರಿಕಲ್ಪಿತ 'ಶ್ರೀಶಾರದಾ ಮಠ'ಗಳು ಕರ್ನಾಟಕದ ಮಹಿಳೆಯರ ಪಾಲಿಗೆ ಒಂದು ವರವಾಗಿದೆ. ಶ್ರೀರಾಮಕೃಷ್ಣ-ವಿವೇಕಾನಂದ ಭಾವಧಾರೆಯಲ್ಲಿ ಶ್ರೀಶಾರದಾ ಮಠಕ್ಕೆ ಕರ್ನಾಟಕದ ಕೊಡುಗೆ ಅಮೋಘವಾದ್ದು, ಅದ್ಭುತವಾದದ್ದು. ಇಲ್ಲಿಯವರಗೆ ಕರ್ನಾಟಕದಿಂದ, ವಿಶೇಷವಾಗಿ ಮೈಸೂರಿನಿಂದ ೫೦ ಹುಡುಗಿಯರು ಶ್ರೀ ಶಾರದಾ ಮಠದ ಸಂನ್ಯಾಸಿನಿಯರಾಗಿದ್ದಾರೆ ಹಾಗೂ ದೇಶ-ವಿದೇಶದ ಮಠದ ಶಾಖೆಗಳಲ್ಲಿ ವಿವಿಧ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಕರ್ನಾಟಕದಿಂದ ಪ್ರಪ್ರಥಮವಾಗಿ ಸೇರಿದ ಕಮಲಾದೇವಿ ಮುಂದೆ ಪ್ರವ್ರಾಜಿಕಾ ಶುಭ್ರಪ್ರಾಣಾಜಿ, ಇವರು ಸತತವಾಗಿ ೩೮ ವರ್ಷಗಳ ಕಾಲ ಬೆಂಗಳೂರು ಶಾಖೆಯ ಮೊದಲ ಅಧ್ಯಕ್ಷರಾಗಿದ್ದರು. ಈ ಮಹಾಸಂಘದ ಮೂರನೇ ಪ್ರಧಾನ ಕಾರ್ಯದರ್ಶಿಗಳಾಗಿ ೨೪ ವರ್ಷಗಳ ಕಾಲ ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ ಪ್ರವ್ರಾಜಿಕಾ ಅಮಲಪ್ರಾಣಾಜಿಯವರು ಮೂಲತಃ ಮೈಸೂರಿನವರು. ಒಟ್ಟಿನಲ್ಲಿ ಈ ಮಹಾಸಂಘಕ್ಕೆ ಶೇಕಡಾ ೨೫ಕ್ಕೂ ಹೆಚ್ಚಿನ ಸಂನ್ಯಾಸಿನಿಯರು ಮೈಸೂರಿನ ಅಧ್ಯಕ್ಷರಾಗಿದ್ದ ದಿವಂಗತ ಸ್ವಾಮಿ ಸೋಮನಾಥಾನಂದರ ಸ್ಫೂರ್ತಿ ಹಾಗೂ ಪ್ರೇರಣೆಯಿಂದ ಸೇರಿದವರು. ಅವರಿಗೆ ಅನಂತ ಪ್ರಣಾಮಗಳು.

ಈ ಆಧುನಿಕ ಯುಗದಲ್ಲಿ ಮಹಿಳೆಯರು ಇಂತಹ ಸಾಧನೆಯ, ಸೇವೆಯ ಪವಿತ್ರ ಜೀವನ ನಡೆಲು ಅವಕಾಶ ದೊರೆತಿರುವುದು ದಿವ್ಯತ್ರಯರ ಅಪಾರ ಕೃಪೆ. ಈ ಕೃಪಾಜಲವು ಎಲ್ಲರ ಮೇಲೂ ಸದಾ ಸುರಿಯುತ್ತಿರಲಿ ಎಂಬುದೇ ಪ್ರಾರ್ಥನೆ.


*ಗ್ರಂಥ ಋಣ:*

*೧) ವಿವೇಕ ಪ್ರಭ, ವಿವೇಕ ಹಂಸ ಪತ್ರಿಕೆಗಳು*

*೨) 'Swami Vivekananda's Dream', Sri Sarada Math*


''ಶ್ರೀರಾಮಕೃಷ್ಣರು ತಾವೇ ಕಾಳೀಮಾತೆಯ ಪೂಜೆಯನ್ನು ಮಾಡಿದರು. ವೇದ ಯಾರನ್ನು 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂದು ವರ್ಣಿಸಿದೆಯೋ, ದ್ವೈತವಾದಿಗಳು ಯಾರನ್ನು ಈಶ್ವರ ಎಂದು ಕರೆಯುತ್ತಾರೋ, ಶಾಕ್ತರು ಯಾರನ್ನು ಶಕ್ತಿ ಎಂದು ಪೂಜಿಸುತ್ತಾರೋ, ವೈಷ್ಣವರಿಗೆ ಯಾರು ವಿಷ್ಣುವಾಗಿದ್ದಾನೋ, ಶೈವರಿಗೆ ಯಾರು ಶಿವನಾಗಿದ್ದಾನೋ, ಅದನ್ನೇ ಶ್ರೀರಾಮಕೃಷ್ಣರು 'ತಾಯಿ' ಎಂದು ಕರೆಯುತ್ತಿದ್ದರು. ಆ ಮಾತೆಯನ್ನು ಪೂಜೆ ಮಾಡಿದ್ದರಿಂದಲೇ ಅವರಿಗೆ ಎಲ್ಲ ಅನುಭೂತಿಗಳೂ ಉಂಟಾದುವು. ಅವರು ಅದ್ವೈತ, ದ್ವೈತ, ವಿಶಿಷ್ಟಾದ್ವೈತ - ಇತ್ಯಾದಿ ಎಲ್ಲ ಭಾವಗಳಲ್ಲೂ ಸಾಕ್ಷಾತ್ಕಾರದ ದಿವ್ಯ ಅನುಭವವನ್ನು ಪಡೆದರು.''

— *ಸ್ವಾಮಿ ಶಿವಾನಂದ*


***With Best Compliments From :***

GAVIRANGA ENTERPRISES
ELECTRONICS DIVISION

**C-9 & M-4, INDUSTRIAL ESTATE, B.H.ROAD**
**TUMKUR - 572 103, KARNATAKA, INDIA.**
**Mob: 98440 99015**
**E-Mail : jayasimha@gaviranga.com**

***Advantage To World-Class Magnetics***